ಖಾಸಗಿ ಶಾಲೆಗಳ ಬಗ್ಗೆ

2754 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ವಿವಿಧ ಸಂಘಟನೆಗಳಿಂದ ಪ್ರಾರಂಭಿಸಿದ ಖಾಸಗಿ ವಿದ್ಯಾ ಸಂಸ್ಥೆಗಳಿಂದ ಎಷ್ಟು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ.*

ಆ) *ಇವುಗಳಲ್ಲಿ ಎಷ್ಟು ವಿವಿಧ ಜಿಲ್ಲೆಯ ಜಿಲ್ಲಾ ಪರಿಷತ್ತುಗಳಿಂದ ಹಾಗೂ ಸರ್ಕಾರದಿಂದ ಪರವಾನಿಗೆ ನೀಡಲಾಗಿದೆ.*

ಇ) *ಯಾವುದೇ ವಿದ್ಯಾ ಸಂಸ್ಥೆಯು ಪ್ರಾರಂಭಿಸುವಲ್ಲಿ ಇಂತಿಷ್ಟು ಇರಬೇಕೆಂದು ನಿರ್ದಿಷ್ಟಪಡಿಸಲಾಗಿದೆಯೇ?*

ಈ) *ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಮಂಜೂರಾತಿ ನೀಡಲು ನಿರ್ದಿಷ್ಟವಾದ ನಿಯಮಾವಳಿಗಳು ಇವೆಯೇ ಹಾಗಿದ್ದಲ್ಲಿ ಅವುಗಳ ವಿವರಗಳೊನ್ನದಗಿಸುವುದು)*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 256 ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ.

1990-91ರಲ್ಲಿ ಸರ್ಕಾರದ ಪೂರ್ವಾನುಮತಿಯಿಲ್ಲದೆ ಯಾವುದೇ ಸಂಯುಕ್ತ ಕಿರಿಯ ಕಾಲೇಜುಗಳು ಪ್ರಾರಂಭವಾಗಿರುವುದಿಲ್ಲ.

ಆ) ಒಟ್ಟು 22 ಪ್ರೌಢಶಾಲೆಗಳಿಗೆ ಸರ್ಕಾರದಿಂದ ಪರವಾನಗಿ ನೀಡಲಾಗಿದೆ.

ಇ) ನಿಗಧಿ ಪಡಿಸಿಲ್ಲ.

ಈ) ಪ್ರೌಢಶಾಲೆಗಳ ಮಂಜೂರಾತಿಗೆ ಸರ್ಕಾರದ ಮಾರ್ಗ ಸೂಚಿಯ ಪತ್ರ ಕ್ರ.ಇಡಿ. 707 ಎಸ್.ಇ.ಎಸ್. 90 ದಿನಾಂಕ 13-2-1991ರ ರೀತ್ಯ ನಿಯಮಗಳನ್ನು ಹಾಗೂ ಅನುದಾನ ಸಂಹಿತೆಯ ನಿಯಮ 9 ಎ.ಬಿ.ಸಿ.ಡಿ.ಇ.ಎಫ್.ಜಿ.ಹೆಚ್.ಐ. ಜಾರಿಯಲ್ಲಿ ಇರುತ್ತವೆ.

ಕಿರಿಯ ಕಾಲೇಜುಗಳ ಮಂಜೂರಾತಿಗೆ ಸರ್ಕಾರದ ಪತ್ರ ಸಂಖ್ಯೆ : ಇಡಿ 47 ಎಸ್.ಹೆಚ್.ಹೆಚ್.91 ದಿ. 1-3-1991ರಲ್ಲಿನ ನಿಯಮಗಳು ಜಾರಿಯಲ್ಲಿರುತ್ತವೆ.

ಜಮೀನು ಭೂದಾನದ ಬಗ್ಗೆ

2793 - ಶ್ರೀ ಜೌಡರೆಡ್ಡಿ (ಚಿಂತಾಮಣಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿನೋಬ ಭಾವೆಯವರು ಭೂದಾನ ಚಳುವಳಿಯಿಂದ ಚಿಂತಾಮಣಿ ತಾಲ್ಲೂಕು ಮತ್ತು ಚೇಳೂರು ಪೋಬಳಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಭೂದಾನವಾಗಿ ಬಂದಿರುವ ಜಮೀನು ವಿಸ್ತೀರ್ಣವೆಷ್ಟು? ಎಷ್ಟು ಎಕರೆ ವಿದ್ಯಾ ಇಲಾಖೆಗೆ ಕೊಟ್ಟಿರುತ್ತಾರೆ?*

(ಗ್ರಾಮವಾರು ವಿವರಗಳನ್ನು ಒದಗಿಸುವುದು)